ದುಡಿಮೆಯ ಶೋಕಿ ಸಾಲದೆಂಬಂತೆ ನನ್ನಂಥವಳ ಪ್ರೇಮ ಬೇರೆ ದಕ್ಕಿತು. ಮೊದಲಿಗೆ ತೀವ್ರತೆಯಿಂದ ತನ್ಮಯಳಾದೆನಾದರೂ ವರ್ಷಗಳು ಉರುಳಿದಂತೆ ಸ್ವಾರಸ್ಯ ಕಮ್ಮಿಯಾಗಿ ಟೈಮ್‌ಪಾಸ್‌ಗೆ ಇರಲಿಬಿಡು ಅಂದುಕೊಂಡೆ. ನೀನೋ ಅದರಲ್ಲೇ ಮುಳುಗೆದ್ದೆಯೇ ವಿನಹ ಸುತ್ತಮುತ್ತಲಿನವರ ಸಂಭ್ರಮದ ಬಗ್ಗೆ ಯೋಚಿಸಿದವನೇ ಅಲ್ಲ. ನಾನು ಯೋಚಿಸಿದೆ – ಕಾರು, ಬಂಗಲೆ, ಪರ್ಸ್ ತುಂಬಾ ಹಣ, ಬೇಕೆಂದದ್ದು ಕಾಲು ಬುಡಕ್ಕೇ ಬಂದು ಬೀಳುತ್ತೆ. ಪ್ರೀತಿಯೊಂದನ್ನು ಬಿಟ್ಟು ಕೈ ಚಾಚಿದ್ದೆಲ್ಲಾ ಸಿಗುತ್ತೆ. ಈ ಪ್ರೀತಿ ಅಂದ್ರೆ ಏನೋ? ಗಂಡನನ್ನು ಪ್ರೀತಿಸೋದಾ? ಮಕ್ಕಳನ್ನೂ ಪ್ರೀತಿಸೋದಾ? ಸಮಾಜವನ್ನು ಪ್ರೀತಿಸೋದಾ? ನನ್ನನ್ನು ನಾನು ಪ್ರೀತಿಸೋದೇ ಪ್ರೀತಿ ಅಂತ ತಿಳಿದವಳು ನಾನಯ್ಯ. ಬೇಕಾದರೆ ನನ್ನನ್ನು ಸ್ವಾರ್ಥಿ ಅಂದಕೋ, ಡೋಂಟ್ ಕೇರ್. ಏನೆಲ್ಲಾ ಇರುವಾಗ ಪ್ರೀತಿ ಮರೆತೂ ಬದುಕಬಹುದು. ಪ್ರೀತಿ ಸಿಕ್ಕೂ ಉಳಿದದ್ದೇನೂ ಸಿಗದಿದ್ದಾಗ ಬದುಕು ದುರ್ಭರವೆಂಬ ವ್ಯಾಖ್ಯಾನ ನನ್ನದಪ್ಪ. ನೀನಿನ್ನೇನು? ನೀನಿಲ್ಲದೆ ಬದುಕಲಾರೆ ಎಂದವ ನನ್ನನ್ನೂ ಮರೆತು ಹೊಸ ಹುಡುಗಿ ಜೊತೆ ಡಕೋಟಾ ಸ್ಕೂಟರಲ್ಲಿ ದೇವಸ್ಥಾನ ರೌಂಡ್ ಹೊಡಿತಿಲ್ವೆ. ಇದೇ ಲೈಫ್ ಕಣೋ. ಹೋಗ್ಲಿಬಿಡು, ಇಬ್ಬರೂ ಸೋಲಲಿಲ್ಲ. ನೆನಪುಗಳು ಇಂದಿಗಿಷ್ಟು ಸಾಕು ಕಣೋ. ಬೆಂಜ್ ಕಾರಿನ ಹಾರನ್ ಕೇಳುತ್ತಿದೆ. ನನ್ನ ಪಾತ್ರ ಬದಲಾಗಬೇಕಿದೆ – ನಿನ್ನೆದುರು ಪ್ರೇಮಿ, ಗಂಡನೆಂದರು ಪತ್ನಿ, ಮಕ್ಕಳೆದುರು ತಾಯಿ ಮತ್ತು ಅತ್ತೆ ಮಾವನ ಎದುರು ಸೊಸೆ, ಆಳುಗಳ ಮುಂದೆ ಮಾಲಕೀನ್. ಎಷ್ಟೆಲ್ಲಾ ಪಾತ್ರಗಳ ನಿರ್ವಹಣೆ ಹೆಣ್ಣಿಗೆ ಮಾತ್ರ ಸಲೀಸು. ಏಕೆಂದರೆ, ಅವಳು ಯಾರಿಗೂ ಸರಿಯಾಗಿ ಅರ್ಪಣೆಯಾಗದ ದರ್ಪಣೆ. ಎದುರಿಗೆ ನಿಂತವರನ್ನಷ್ಟೇ ನೋಡಬಲ್ಲಳು. ಯಾರೇ "ಫ್ಲರ್ಟ್" ಅಂದುಕೊಂಡರೂ ಡೋಂಟ್ ಕೇರ್. ಸೆಂಟಿಮೆಂಟ್‌ಗೆ ಬಲಿಯಾಗಿ ಮೆಂಟಲ್ ಆಗೋದಕ್ಕಿಂತ ಇದು ವಾಸಿ. ಇನ್ನೊಬ್ಬರಿಗಾಗಿ ತ್ಯಾಗ ಮಾಡುತ್ತಾ, ಫೈಟ್ ಮಾಡುತ್ತಾ, ಬದುಕಲು ಜೀವನ ಎರಡೂವರೆ ಗಂಟೆ ಪಿಕ್ಚರ್ ಅಲ್ಲವಲ್ಲ. ಕತ್ತಲಲ್ಲಿ ಕಣ್ಣು ಬಿಟ್ಟು ನೋಡೋದು ಪಿಕ್ಚರ್. ಕಣ್ಣುಮುಚ್ಚಿ ನಂಬಿದೋರ್ನ ಮೆಚ್ಚೋದು ಪ್ರೀತಿ. ಎರಡೂ ಕತ್ತಲ ಗಿಫ್ಟ್‌ಗಳು. ದೀಪ ಬೆಳಗಿದಾಗ ಇಬ್ಬರೇ ಕಾಣೋದಿಲ್ಲ ಅಲ್ವೇನೋ? ನಿಜ ಕಣೋ, ಇಬ್ಬರೆ ಇಬ್ಬರಿಗಾಗಿ ಕೊನೆಯವರೆಗೂ ಬಾಳೋಕಾಗಲ್ಲ ಕಣಯ್ಯ. ಪ್ರೀತಿಯ ಆಚೆಗೂ ಬದುಕಿದೆ. ಅರೆ! ಮೆಟ್ಟಿಲುಗಳನ್ನು ಹತ್ತಿಬರುತ್ತಿವೆ ಬೂಟುಗಳು. ಬಾಗಿಲು ತೆರೆಯಬೇಕಿದೆ. ಪಾತ್ರ ಬದಲಾಗಬೇಕಿದೆ. ಸೀ ಯು ಲೇಟರ್ ಮೈ ಬಾಯ್.


**ಬಿ.ಎಲ್. ವೇಣು**

ನಾಲ್ಕು ದಶಕಗಳಿಂದ ಕತೆ, ಕಾದಂಬರಿ, ಸಿನಿಮಾ–ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕ ಬಿ.ಎಲ್. ವೇಣು. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಐತಿಹಾಸಿಕ ಕಾದಂಬರಿ 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದೆ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 66 ಕೃತಿಗಳು ಪ್ರಕಟಗೊಂಡಿದ್ದು, 15 ಕೃತಿಗಳು ಸಿನಿಮಾ ಆಗಿವೆ. 66 ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ನಿವೃತ್ತರು.